<u>ಸಾಕ್ಷಿಯನ್ನು ದಿನಾಂಕ **02-08-2023** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ ಶ್ರೀ ಕೆ ಎಸ್ ಹೆಚ್ ವಕೀಲರಿಂದ ಅರ್ಜಿದಾರ ಪರವಾಗಿ</u> ಃ(ಸಾಕ್ಷಿಯು ಸಾಕ್ಷಿಯ ಕಟಕಟೆಯಲ್ಲಿ ಹಾಜರಾಗಿ ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿ ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ ಎಂದು ಸತ್ಯಾಪನೆ ಮಾಡಿರುತ್ತಾರೆ)

ಪ್ರ. ವ. ವರದಿ, ದೂರು, ಅಂತಿಮ ವರದಿ, ಫಿರ್ಯಾದಿಯ ಮರುಹೇಳಿಕೆ, ಸಾಕ್ಷಿಗಳ ಹೇಳಿಕೆಗಳು, ಘಟನಾ ಸ್ಥಳದ ಪಂಚನಾಮೆ, ಕಚ್ಚಾ ನಕಾಶೆ, ಘಟನಾ ಸ್ಥಳದ ಪೊಟೋ, ಮೋಟಾರ್ ಸೈಕಲ್ ನ ಜಪ್ತಿ ಪಂಚನಾಮೆ, ಈ ಜಪ್ತಿ ಪಂಚನಾಮೆಗೆ ಸಂಬಂಧಪಟ್ಟ ಪೊಟೋಗಳ ಪ್ರತಿ, ಗಾಯದ ಪ್ರಮಾಣಪತ್ರ, ಎಂ ವಿ ಐ ವರದಿ ಇವೆಲ್ಲವುಗಳ ದೃಡೀಕೃತ ಪ್ರತಿಗಳನ್ನು ನಿಪಿ-1 ರಿಂದ ನಿಪಿ-14 ಎಂದು, ಸಿ ಸಿ 355/22 ರ ಪ್ರಕರಣದ ಆದೇಶ ಪುಟದ ದೃಡೀಕೃತ ಪ್ರತಿಯನ್ನು ನಿಪಿ-15 ಎಂದು, ದಂಡ ಪಾವತಿಸಿದ ರಶೀದಿಯ ಪ್ರತಿಯನ್ನು ನಿಪಿ-16 ಎಂದು, ಸೂಚನಾ ಪತ್ರ ವನ್ನು ನಿಪಿ-17 ಎಂದು, 1 ನೇ ಎದುರುದಾರನ ಚಾಲನಾ ಪರವಾನಿಗೆಯ ಪ್ರತಿಯನ್ನು ನಿಪಿ-18 ಎಂದು, 2 ನೇ ಎದುರುದಾರನ ಹೆಸರಿನಲ್ಲಿರುವ ಅಪಘಾತಪಡಿಸಿದ ವಾಹನದ ನೊಂದಣಿಯ ನಿಜ ಪ್ರತಿಯನ್ನು ನಿಪಿ-19 ಎಂದು, ಫಾರಂ ನಂಃ 23 ರ ಪ್ರತಿಯನ್ನು ನಿಪಿ-20 ಎಂದು, ವಿಮಾ ಪಾಲಿಸಿಯ ಪ್ರತಿಯನ್ನು ನಿಪಿ-21 ಎಂದು, ನನ್ನ ಆಧಾರ್ ಕಾರ್ಡಿನ ನಿಜ ಪ್ರತಿಯನ್ನು ನಿಪಿ-22 ಎಂದು ಗುರುತಿಸಲಾಯಿತು. ಮೂಲ ಆಧಾರ್ ಕಾರ್ಡನ್ನು ಪರಶೀಲಿಸಿ ಪಕ್ಷಗಾರರಿಗೆ ಮರಳಿ ನೀಡಲಾಯಿತು.

<u>ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.</u>

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.